4

# ಪೌಲನ ಅಂತಿಮ ವಿಮರ್ಶೆ

## (ಫಿಲೆಮೋನ 21-25)

ಫಿಲೆಮೋನನಲ್ಲಿರುವ ಮುಖ್ಯ ಪ್ರಸ್ತಾಪವನ್ನು ಪೌಲನು ವಚನ 20ರಲ್ಲಿ ಅಂತ್ಯಗೊಳಿಸುತ್ತಿರುವನು. ಕಷ್ಟಕರವಾದ ವಿಷಯವು ತೀರಿತು, ಅವನು ಹೇಳು ವಂಥದ್ದನೆಲ್ಲಾ ಸಾರಾಂಶವಾಗಿ ಹೇಳುವುದೊಂದೆ ಉಳಿದಿರುತ್ತದೆ, ಅವನ ಮುಂದಿನ ಪ್ರಯಾಣದ ಕುರಿತು, ಇತರರ ವಂದನೆಯ ಕುರಿತು, ಅಂತ್ಯಾಶೀರ್ವಾದವನ್ನು ನೀಡುತ್ತಿರುವನು. ಪೌಲನು ಈ ಪತ್ರಿಕೆಯನ್ನು ಬರೆಯುವಾಗ, ವ್ಯಾಕುಲಪಟ್ಟಿದ್ದನು, ಆದರೆ ವಚನ 21ರಲ್ಲಿ ಅವನು ನಿರಾಳನಾದನು, ಶಾಂತಿಗೊಂಡು ಫಿಲೆಮೋನನ ಪತ್ರಿಕೆಯನ್ನು ಅಂತ್ಯಗೊಳಿಸಲು ಸಂತೋಷಪಟ್ಟನು.

"ಭರವಸವುಳ್ಳವನಾಗಿರುವೆನು" (ವಚನ 21) ಗ್ರೀಕ್ ಭಾಷೆಯ ಪೂರ್ಣವಾದ ಕೃದ್ಧಾಚಕವಾಗಿದೆ ಏನನ್ನೋ ಸಾಧಿಸಿದ ಸೂಚನೆ, ಫಿಲೆಮೋನನು ಅವನ ಬಿನ್ನಹವನ್ನು ಮನ್ನಿಸುವನು ಎಂಬ ಭರವಸೆಯನ್ನು ಪೌಲನು ಹೊಂದಿದ್ದನು.

"ನಿನ್ನಲ್ಲಿರುವ ವಿಧೇಯತೆ" ಗುಲಾಮನ ಯಜಮಾನನಿಗೆ, ಓಡಿಹೋದ ಗುಲಾಮನ ವಿಚಾರವಾಗಿ, ಬರೆದು ತಾನು ಹೇಳಬೇಕಾದದ್ದನ್ನು ದೃಢಪಡಿಸಿದ್ದನು. ಈ ವಿಷಯದಲ್ಲಿ ಫಿಲೆಮೋನನಿಗೆ "ಆಜ್ಞೆ ನೀಡಲು" ಪೌಲನು ನಿರಾಕರಿಸಿದ್ದನು, ಫಿಲೆಮೋನನು ಏನನ್ನು ಮಾಡಬೇಕು ಎಂದು ಆಜ್ಞಾಪಿಸದೆ, ಅವನಿಗೆ "ಬಿನ್ನಹವನ್ನು" ಮಾಡಿದನು (ವಚನಗಳು 8, 9), ಆದರೆ, ಇಲ್ಲಿ ಏಕೆ "ವಿಧೇಯತೆಯ" ಪದವನ್ನು ಬಳಸುತ್ತಿರುವನು? (*Hupakope*) ಎಂಬ ಗ್ರೀಕ್ ನಾಮ ಪದವನ್ನು ದೇವರ ವಿಧೇಯತೆಯ ಮತ್ತು ಆತನ "ಆಜ್ಞೆಗಳ" ಕುರಿತು ಹೇಳು ವಾಗ, ಪೌಲನು ಬಳಸಿರುವನು (ರೋಮಾಪುರ 5:19; 6:16). ಓನೇಸಿಮನ ಕುರಿತಾಗಿ ಪೌಲನು ನೀಡಿದ ನಿರ್ದಿಷ್ಟವಾದ "ಅಪ್ಪಣೆಯನ್ನು" ಹೊರತುಪಡಿಸಿ, ಫಿಲೆಮೋನನು ದೇವರ ಚಿತ್ತಕ್ಕೆ ಒಳಗಾಗುವ ವಿಧೇಯತೆಯನ್ನು ಅವನು ಹೊಂದಿರಬೇಕೆಂದು ಬರೆದಿರುವನು. ಪೌಲನು ಆಜ್ಞೆ ಮಾಡದೆ ಇದ್ದರೂ, ಫಿಲೆಮೋನನು ದೇವರಿಗೆ ವಿಧೇಯನಾಗಿರಬೇಕೆಂದು ಬಯಸಿದನು.

ಪೌಲನು 16ನೇ ವಚನದಲ್ಲಿ ಓನೇಸಿಮನನ್ನು ಹಿಂದಿರುಗಿ ಕೊಲೊಸ್ಸೆ ಸಭೆಗೆ ಕಳಿಸು ವಾಗ ಅವನಿಗೆ ದಾಸನಾಗದೆ "ದಾಸನಿಗಿಂತ ಹೆಚ್ಚಾಗಿ ಪ್ರಿಯ ಸಹೋದರನಂತಾಗ ಬೇಕು" ಎಂದು ಹೇಳಿ ಕಳುಹಿಸಿದ್ದನು. ವಚನ 21ರಲ್ಲಿ, "ನಾನು ಹೇಳಿದ್ದಕ್ಕಿಂತಲೂ ಹೆಚ್ಚಾಗಿ" ಫಿಲೆಮೋನನು ಮಾಡುವನೆಂದು ಪೌಲನು ಭರವಸವುಳ್ಳವನಾಗಿದ್ದನು. "ಹೆಚ್ಚು" ಎಂಬ ಪದವು ಪೌಲನ ಮನಸ್ಸನಲ್ಲಿತ್ತು, ಅಥವಾ ಫಿಲೆಮೋನನ ಕಿವಿಯಲ್ಲಿರಬಹುದು, ಎಂಬುದು ವಿವರಣೆಕಾರರ ಅಭಿಪ್ರಾಯವಾಗಿರಬಹುದು. ಫಿಲೆಮೋನನು, ಓನೇಸಿ ಮನನ್ನು ಬಿಡುಗಡೆ ಮಾಡಿದ ನಂತರ, ಅವನು ರೋಮಾಪುರದಲ್ಲಿದ ಪೌಲನಿಗೆ ಸೇವೆ ಮಾಡಬೇಕಿತ್ತು ಎಂಬ ಸೂಚನೆಯನ್ನು ಪೌಲನು ನೀಡಿರಬಹುದು? ಅದನ್ನು ಕ್ರಮಪಡಿಸುವುದೇ ಪೌಲನ ಭರವಸ ವಾಗಿತ್ತು, ಒಂದು ವೇಳೆ ಈ ವಿಧವಾದ ಹೇಳಿಕೆಯು, ಪೌಲನಲ್ಲಿ ಇರಬಹುದು ಅಥವಾ ಇಲ್ಲದೆ ಇರಬಹುದು, ಆದರೆ ಪೌಲನು ವಿಶೇಷ ಭರವಸವನ್ನು ಹೊಂದಿದವನಾಗಿ, ಓನೇಸಿಮನನ್ನು ಪತ್ರಿಕೆಯೊಂದಿಗೆ ಫಿಲೆಮೋನನ ಬಳಿಗೆ ಕಳುಹಿಸಿದ್ದನು, ಎಂಬುದು ಸ್ಪಷ್ಟವಾಗಿದೆ.

ವಚನ 22ರಲ್ಲಿ ವ್ಯತ್ಯಾಸವುಳ್ಳ ಒಂದು ಮನವಿಯನ್ನು ಮಾಡಲಾಗಿದೆ: "ಆದಕಾರಣ

ನನಗೋಸ್ಕರ ಇಳುಕೊಳ್ಳುವ ಸ್ಥಳವನ್ನು ಸಿದ್ಧಮಾಡು.'' ಈ ಮನವಿಯು ಪೌಲನ ಎರಡು ಕೋರಿಕೆಗಳನ್ನು ಪೂರ್ಣ ಮಾಡಿತು, ಎಂಬುದನ್ನು ಈ ಪತ್ರಿಕೆಯ ಅಂತ್ಯದಲ್ಲಿ ತಿಳಿಸಲಾಗಿದೆ. ಮೊದಲನೆಯದಾಗಿ, ಕೊಲೊಸ್ಸೆ ಸಭೆಯನ್ನು ಮತ್ತು ಫಿಲೆಮೋನನನ್ನು ಸಂಧಿಸುವ ಅಭಿಲಾಷೆಯ ಭರವಸೆ. ಎರಡನೆಯದಾಗಿ, ಅವನ ಮನೆಯಲ್ಲಿ ಇಳುಕೊಳ್ಳಲು ಸ್ಥಳವನ್ನು ಕೇಳುತ್ತಿರುವನು, ಫಿಲೆಮೋನನನ್ನು "ಪ್ರಿಯ ಸಹೋದರರನು ಮತ್ತು ಜೊತೆ ಕೆಲಸದವನೆಂದು" ಪೌಲನು ಪರಿಗಣಿಸಿದ್ದನು (ವಚನ 1). ಪ್ರಾಚೀನ ಪ್ರಪಂಚದಲ್ಲಿ, ಅತಿಥಿ ಸತ್ಕಾರವನ್ನು ಸಕಲ ವಿಧದಲ್ಲೂ ಸನ್ಮಾನಿಸುತ್ತಿದ್ದರು, ಅದು ಅತಿಥಿಯನ್ನು ಸೇರಿಸಿಕೊಳ್ಳುವುದು ಮಾತ್ರವಲ್ಲದೆ, ಒಬ್ಬ ಪ್ರವಾಸಿಯನ್ನು ಅತಿಥಿ ಎಂದು ಸಹ ಒಪ್ಪಿಕೊಳ್ಳುತ್ತಿದ್ದರು. ಓನೇಸಿಮನ ವಿಷಯದಲ್ಲಿ, ಇಬ್ಬರ ನಡುವೆ ಯಾವುದೇ ಸಂಗತಿಯು ನಡೆದಿರಬಹುದು, ಆದರೆ ಅದರ ಅನ್ಯೋನ್ಯತೆ ಮಾತ್ರ ಬಲವಾಗಿತ್ತು.

"ದೇವರು ನಿನ್ನ ಪ್ರಾರ್ಥನೆಗಳನ್ನು ಕೇಳಿ ನನ್ನನ್ನು ನಿಮ್ಮ ಬಳಿಗೆ ಬರುವದಕ್ಕೆ ಅನುಗ್ರಹಿಸುವನೆಂದು ನನಗೆ ನಿರೀಕ್ಷೆ ಉಂಟು.'' ವಚನ 3 ನಂತರ, ಪೌಲನು ಇಲ್ಲಿ ಫಿಲೆಮೋನನನ್ನು ಕುರಿತು "ನಿನ್ನ'' ಮತ್ತು "ನೀನು'' ಎಂಬ ಗ್ರೀಕ್ ಬಹುಪದವನ್ನು ಬಳಸಿರುವನು. ಪುನಃ, ಅಪ್ಪಿಯ, ಅರ್ಖಿಪ್ಪ ಮತ್ತು ಫಿಲೆಮೋನನ ಮನೆಯಲ್ಲಿ ಸೇರಿ ಬರುತ್ತಿದ್ದ ಸಭೆಯ ಕುರಿತಾಗಿ ಮಾತುಗಳನ್ನಾಡಿರುವರು. ಅವರನ್ನು ಸಂಧಿಸುವ ಕಾರ್ಯವು, ದೇವರ ಕ್ರಿಯೆಯಾಗಿರುತ್ತಿದೆ ಎಂದು ಪೌಲನು ಒಪ್ಪಿಕೊಂಡನು. ಇದರ ಸಂಗಡ, ಅವರ ಪ್ರಾರ್ಥನೆಯ ಮೂಲಕವಾಗಿ ಮಾತ್ರ ಪೌಲನು ಅವರನ್ನು ಸಂಧಿಸುವ ಸಾಧ್ಯತೆ ಇದೆಯೆಂದು ತಿಳಿಸಿದನು.

ಪೌಲನು ಮುಂದಾಗಿ ತನ್ನ ಜೊತೆಯಲ್ಲಿದ್ದವರು ತಿಳಿಸಿದ ವಂದನೆಗಳನ್ನು ಫಿಲೆಮೋನ ನಿಗೆ ಈ ಪತ್ರಿಕೆಯನ್ನು ಬರೆಯವಾಗ ತಿಳಿಸಿದನು (ವಚನ 23). ಕೊಲೊಸ್ಸೆ ಪತ್ರಿಕೆಯನ್ನು ಬರೆಯುವಾಗಲೂ ಇಲ್ಲಿರುವ ಹೆಸರುಗಳನ್ನು ಹೆಸರಿಸಲಾಗಿದೆ (ಕೊಲೊಸ್ಸೆ 4:10-14). "ಎಪಫ್ರೋದಿತನು'' ಕೊಲೊಸ್ಸೆಯಲ್ಲಿ ಪ್ರಥಮವಾದ ಸುವಾರ್ತಾ ಪ್ರಸಂಗವನ್ನು ಮಾಡಿದ್ದನು. ಕೊಲೊಸ್ಸೆಯವರಿಗೆ ಪೌಲನು ಬರೆಯುವಾಗ "ನಿಮ್ಮಲ್ಲಿರುವ ಒಬ್ಬನು'' ಎಂದಿರುವನು (ಕೊಲೊಸ್ಸೆ 4:12). ಪೌಲನು ಫಿಲೆಮೋನ ನಿಗೆ ಬರೆಯುವಾಗ, ಎಪಫ್ರೋದಿತನು ಪೌಲನ ಜೊತೆಯಲ್ಲಿ "ಕ್ರಿಸ್ತ ಯೇಸುವಿನ ಸೆರೆಯವನಾಗಿದ್ದನು'' ಪೌಲನ ಗೃಹ ಬಂಧನದಲ್ಲಿ ಇವನು ಸೇರಿದವನಾಗಿರಬಹುದು (ಅಪೊಸ್ತಲಕೃತ್ಯಗಳು 28:30, 31). "ನಿನ್ನನ್ನು ವಂದಿಸುತ್ತಾರೆ'' ಎಂಬುದು "ನಿನ್ನನ್ನು'' ಎಂಬ ಏಕಪದದ ಪುನರಾವರ್ತನೆಯಾಗಿರುತ್ತದೆ. ಎಪಫ್ರೋದಿತನು ತನ್ನ ವೈಯಕ್ತಿಕವಾದ ವಂದನೆಯನ್ನು ಫಿಲೆಮೋನನಿಗೆ ತಿಳಿಸಿರುವನು.

ವಚನ 24ರಲ್ಲಿ ವಂದನೆ ತಿಳಿಸುವವರ ಪಟ್ಟಿಯು ಮುಂದುವರೆಯುತ್ತದೆ. ಯೋಹಾನ ನೆನಿಸಿಕೊಳ್ಳುವ "ಮಾರ್ಕನು'' ಬಾರ್ನಬಸನ ಚಿಕ್ಕಪ್ಪನ ಮಗನು ವಂದನೆಯನ್ನು ತಿಳಿಸಿರುವನು (ಅಪೊಸ್ತಲಕೃತ್ಯಗಳು 15:37, 38ರಲ್ಲಿ ಅವನು ಈ ಹಿಂದೆ ಪೌಲನಿಗೆ ಅಪ್ರಯೋಜಕನಾಗಿದ್ದರೂ, ನಂತರ ಅವನು ಅಪೊಸ್ತಲನಿಗೆ ಪ್ರಯೋಜನಕನು ಹಾಗೂ ಅವಲಂಭಿಸಲ್ಪಡುವ ವ್ಯಕ್ತಿಯು ಆಗಿದ್ದನು (2 ತಿಮೊಥೆ 4:11) ಅರಿಸ್ತಾರ್ಕನು "ಮೆಕೆದೋ ನ್ಯದ ಥೆಸಲೋನಿಕದವನಾಗಿದ್ದನು'' (ಅಪೊಸ್ತಲಕೃತ್ಯ ಗಳು 27:2) ಎಫೆಸದಲ್ಲಿ ಉಂಟಾದ ವಿರೋಧದ ದಿನದಿಂದಲೂ ಪೌಲನ ಸಂಗಡ ಇದ್ದನು. ಕೊಲೊಸ್ಸೆ 4:10ರಲ್ಲಿ ಅವನು "ನನ್ನ ಜೊತೆ ಸೆರೆಯವನು'' ಎಂದು ಪೌಲನು ತಿಳಿಸಿರುವನು. "ದೇಮನು'' "ಇಹಲೋಕವನ್ನು ಪ್ರೀತಿಸಿ'' ನನ್ನನ್ನು ಬಿಟ್ಟು ಹೋದನು, ಅವನ ಹೆಸರನ್ನು ಸಂಕ್ಷಿಪ್ತವಾಗಿ ಬಳಸಲಾಗಿದೆ (2 ತಿಮೊಥೆ 4:10). "ಪ್ರಿಯ ವೈದ್ಯನಾಗಿರುವ ಲೂಕನು'' (ಕೊಲೊಸ್ಸೆ 4:14). ಹೊಸ ಒಡಂಬಂಡಿಕೆಯಲ್ಲಿ ಹೆಚ್ಚಿನ ಪುಸ್ತಕಗಳನ್ನು ಬರೆದಿರುವ ಅನ್ಯನು. ಕೆಲವು ವರ್ಷಗಳ ನಂತರ, ಮರಣದ ಶಿಕ್ಷೆಗಾಗಿ ಕಾಯುತ್ತಿದ್ದವನು, "ಲೂಕನು ಮಾತ್ರ ನನ್ನೊಂದಿಗಿರುವನು'' ಎಂದು ಪೌಲನು ತಿಳಿಸಿದನು (2 ತಿಮೊಥೆ 4:11). ಪೌಲನು ಇವರೆಲ್ಲರನ್ನು "ನನ್ನ ಜೊತೆ

ಕೆಲಸದವರು" ಎಂದು ಹೇಳುವ ಹೇಳಿಕೆಯು ಫಿಲೆಮೋನನಿಗೂ ಅನ್ವಹಿಸುತ್ತದೆ.

ವಿಶಿಷ್ಟವಾದ ವಿಧದಲ್ಲಿ ಪೌಲನ ಪತ್ರಿಕೆಯು ಅಂತ್ಯಗೊಳ್ಳುತ್ತದೆ, "ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮ ಆತ್ಮದೊಂದಿಗಿರಲಿ" ಎಂಬ ಅಂತ್ಯಾಶೀರ್ವಾದ (ವಚನ 25). "ನಿಮ್ಮ" ಎಂಬುದು ಪುನಃ ಬಳಸಿರುವ ಬಹು ಪದ, ಅದು ಪ್ರಾರಂಭವಾದಂತೆ, ಅಂತ್ಯಗೊಳ್ಳುತ್ತಿದೆ, ಫಿಲೆಮೋನನ್ನೊಬ್ಬನನ್ನೆ ತಿಳಿಸದೆ, ಎಲ್ಲರನ್ನು ಒಳಗೊಂಡಿದೆ. "ಆತ್ಮ" ಎಂಬುದು "ಮನುಷ್ಯನ ಆತ್ಮಕ್ಕೆ" ಸಮಾನವಾಗಿದೆ ಅಥವಾ ಅದರ ಇರುವಿಕೆಯ ಸೂಚನೆಯೂ ಹೌದು. ನೀವೆಲ್ಲರೂ "ಆತ್ಮೀಕ" ಜೀವಿತಗಳು ಎಂಬ ಸೂಚನೆ.

ಮಾರ್ಟಿನ್ ಲೂತರನ ಹೇಳಿಕೆಯನ್ನು ಉಪಯೋಗಿಸಿ, ಜೋಸೆಫ್ ಫಿಟ್ಸ್ ಮೆಯರ್ ರವರು, ಫಿಲೆಮೋನನ ಪತ್ರಿಕೆಯ ವಿವರಣೆಯನ್ನು ಅಂತ್ಯಗೊಳಿಸಿರುವರು:

> ದೇವ ಸೇವಕರನ್ನು ಸೇವೆಗೆ ಒಪ್ಪಿಸಿಕೊಡುವ ವಿಷಯದಲ್ಲಿ, ಮಾರ್ಗದರ್ಶನ ನೀಡುವ ಖಾಸಗಿಯದ ಪತ್ರಿಕೆಯನ್ನು ನಾವು ಹೊಂದಿರುವೆವು, ತಪ್ಪು ಮಾಡುವವರ, ಹಾಗೂ ದಾರಿ ತಪ್ಪಿದವರನ್ನು, ಸಭೆಯಲ್ಲಿ ಸರಿಪಡಿಸುವ ಕುರಿತು ಉದಾಹರಣೆಯನ್ನು ನೀಡಲಾಗಿದೆ, ಕ್ರಿಸ್ತನ ರಾಜ್ಯವು, ಕರುಣೆ ಮತ್ತು ಕೃಪೆಯ ರಾಜ್ಯವಾಗಿದೆ ...[1]

---

## ವಾಕ್ಯಭಾಗದ ಪ್ರಸಂಗ

## ಒಬ್ಬನನ್ನು ನಂಬುವದರಿಂದ ಉಂಟಾಗುವ ಬಲ

ಡೇಲ್‌ವಾಸರ್ *ಮನ್,ಮ್ಯೂಸಿಕಲ್ ಅಫ್ ಲಾ ಮಂಚ್* ಎಂಬ ಕಾರ್ಯಕ್ರಮವು ನವಂಬರ್ 22, 1965ರಲ್ಲಿ, ನ್ಯೂಯಾರ್ಕ್‌ನಲ್ಲಿ ಪ್ರಾರಂಭವಾಯಿತು, ಮತ್ತು 2,329 ಕಾರ್ಯಕ್ರಮಗಳನ್ನು ಪ್ರಾಯೋಜಿಸಿತ್ತು. *Don Quixote,* ಸ್ಪಾನೀಷ್ ಶಾಸ್ತ್ರೀಯ ಕಾದಂಬರಿಯ್ನು ಆದರಿಸಿ ಮಾಡಲಾಗಿತ್ತು. ವೀರ ಕೌಶಲ್ಯದ ಕಾಲವನ್ನು ಸಂರಕ್ಷಿಸಲು ಹಾಗೂ ಕೆಟ್ಟದಕ್ಕೆ ವಿರೋಧವಾಗಿ ಹೋರಾಡಿದ ಒಬ್ಬ ಮನುಷ್ಯನ ಕಥೆಯನ್ನು ಹೇಳಲಾಗಿದೆ. Don Quixote, ತನ್ನ ಪ್ರವಾಸದ ಸಾಯಂಕಾಲದಲ್ಲಿ ಒಂದು ವಸತಿ ಗ್ರಹದಲ್ಲಿ ಇಳುಕೊಂಡು, ಅಲ್ಲಿ ಅಡ್‌ಡೋನ್ಸ್ ಎಂಬ ದುವರ್ತನೆಯ, ಅನೈತಿಕ ದಾಸಿಯನ್ನು ಎದುರಿಸಿದನು. Don Quixote, ದೃಷ್ಟಿಯಲ್ಲಿ ಆಕೆಯು "ಡುಲ್‌ಸಿನಿಯಾ" ಎಂದರೆ ಶುದ್ಧವಾದ ಮತ್ತು ಶಿಸ್ತಿನ "ಆಹ್ವಾನಿಸುವ ಸ್ತ್ರೀಯಾಗಿದ್ದಳು" ಅಂದರೆ ಶುದ್ಧವಾದ ಮತ್ತು ಶಿಸ್ತಿನ ಆಹ್ವಾನಿಸುವ ಸ್ತ್ರೀಯಾಗಿದ್ದಳು. ಆಕೆಯ ಉನ್ನತವಾದ ಹೆಸರಿನಲ್ಲಿ ವಿಶೇಷವಾದ ಹೋರಾಟವನ್ನು ಮಾಡಲು ನಿರ್ಣಯಸಿದೆನು. ಆಲ್‌ಡೊನ್ಸ್‌ಳು ಅವನನ್ನು ಹುಚ್ಚನೆಂದು ತಿಳಿದು ಮತ್ತು ಪರಿಹಾಸ್ಯ ಮಾಡಿ, ಇತರರಂತೆ ಪರಿಗಣಿಸಿದಳು.

ನಂತರ ಆ ನಾಟಕದಲ್ಲಿ, Don Quixote, ಆತ್ಮವು ಮುರಿದು ಹೋಯಿತು. ಅವನು ಮನೆಗೆ ಹಿಂದಿರುಗಿ ನಿರೀಕ್ಷೆಯಿಲ್ಲದ ವೃದ್ಧನಾಗಿ ಸಾಯಲು ಬಯಸಿದನು. ಆಲ್‌ಡೊನ್ಸ್‌ಳು ಅವನನ್ನು ಮನೆಯವರೆಗೆ ಹಿಂಬಾಲಿಸಿ ಮತ್ತು ಆಕೆಯೊಂದಿಗೆ ಕನಸನ್ನ ಕಂಡು ಪುನಃ ಅವಳನ್ನು "ಡುಲಿಸಿನಿಯಾ" ಎಂಬುದಾಗಿ ಕರೆ ಎಂದು ಮನವಿ ಮಾಡಿಕೊಂಡಳು. ಕ್ವಿಕ್ಸೋಟನು ತನ್ನ ಮರಣದ ಹಾಸಿಗೆಯಿಂದ ಎದ್ದು ಅವನು ಸಾಯುವದಕ್ಕಿಂತ ಮೊದಲು ಅವನ ವಿಶೇಷವಾದ ಕನಸಿನ ಬಗ್ಗೆ ಹಾಡಿದನು. ಜನರು ಬಂದು ಅಲ್‌ಫೋನ್ಸ್‌ಳನ್ನು ಕೊಠಡಿಯಿಂದ ಹೊರತರಲು ಪ್ರಯತ್ನಿಸಿದಾಗ ಅವಳು ಅವರೆಲ್ಲರನ್ನು ಹಿಂದಕ್ಕೆ ತಳ್ಳಿ ನನ್ನ ಹೆಸರು "ಡುಲ್‌ಸಿನಿಯಾ" ಎಂದು ನಿಶ್ಚಯವಾಗಿ ಹೇಳಿದಳು.

ಜನರು ತಮ್ಮ ಬಯಕೆಗಳಿಗಾಗಿ ಮೇಲೆರುತ್ತಾರೆ ಅಥವಾ ಹೀನವಾದ ಸ್ಥಿತಿಗೆ ಇಳಿಯು ತ್ತಾರೆ. ಜನರಲ್ಲಿ ಉತ್ತಮವಾದದ್ದನ್ನು ನಾವು ನೋಡುವಾಗ, ಅವರು ಸಹ ಅದನ್ನೇ ನೋಡು

ವವರಾಗಿರುತ್ತಾರೆ. ಪೌಲನು ಫಿಲೆಮೋನನನ್ನು "ನಮಗೆ ಪ್ರಿಯನಾದ ಸಹೋದರನು ಮತ್ತು ಜೊತೆ ಕೆಲಸದವನೆಂಬುದಾಗಿ ಕರೆದು ಅವನನ್ನು ದೇವ ಜನರ ಹೃದಯಗಳನ್ನು ಸಂತೃಸಿದ ವಿಶೇಷವಾದ ಸ್ವಭಾವವನ್ನು ಹೊಂದಿರುವವನು ಎಂದು ಉತ್ತೇಜಿಸಿದನು." ಓನೇಸಿಮನ ವಿಷಯದಲ್ಲಿ ಫಿಲೆಮೋನನು ಸರಿಯಾದ ಕಾರ್ಯವನ್ನು ಮಾಡುವದರಲ್ಲಿ ವಿಧೇಯನಾಗುವನು ಎಂಬ ಭರವಸೆಯನ್ನು ಪೌಲನು ಹೊಂದಿದ್ದನು. ಪತ್ರಿಕೆಯ ಅಂತ್ಯದಲ್ಲಿ, ಪೌಲನ ವಿಶೇಷವಾದ ದರ್ಶನಕ್ಕೆ ಅನುಗುಣವಾಗಿ ಫಿಲೆಮೋನನು ಜೀವಿಸಿದನು ಎಂಬ ನಿರೀಕ್ಷೆಯನ್ನು ಓದುಗರು ಹೊಂದುವವರಾಗುತ್ತಾರೆ.

---

**ಟಿಪ್ಪಣಿ**

[1]Joseph A. Fitzmyer, *The Letter to Philemon,* The Anchor Bible (New York: Doubleday, 2000), 126.